ದಿಃ 23.09.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ವಿಭಾಗ ಪತ್ರ ಮಾಡುವಾಗ ಸ್ವತ್ತಿಗೆ ಸಂಬಂಧಿಸಿದ ಸ್ಕೆಚ್ ನ್ನು ತಯಾರಿಸಬೇಕಾಗುವುದು ಎಂದರೆ ಸರಿ. ಸದರಿ ಸ್ಕೆಚ್ ನಂತೆ ಯಾರಿಗೆ ಯಾವ ಭಾಗ ಬರುತ್ತದೆ ಎಂದು ನಮೂದಿಸಿ ಅದಕ್ಕೆ ಎಲ್ಲರೂ ಸಹಿ ಮಾಡುತ್ತಾರೆ ಎಂದರೆ ಸರಿ. ನಿಪಿ 10 ರಲ್ಲಿ ತಿಪ್ಪೇನಾಯಕ ಎಂದು ಇರುವ ಸಹಿ ನನ್ನದು. ನಿಪಿ 10 ರಲ್ಲಿ ಬರೆದ ವಿಷಯ ತಿಳಿದುಕೊಂಡು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು 7 ನೇ ತರಗತಿಯ ವರೆಗೂ ವಿದ್ಯಾಭ್ಯಾಸ ಮಾಡಿದ್ದೇನೆ ಎಂದರೆ ಸರಿಯಲ್ಲ.

2. ಸರ್ವೆ ನಂ. 112 ರಲ್ಲಿ ಕೊಳವೆ ಬಾವಿ ಇದೆ.( ಹೊಸ ಸರ್ವೆ ನಂ. 222) ಒಟ್ಟು ವಿಸ್ತೀರ್ಣ 3 ಎಕರೆ ಇರುತ್ತದೆ. ಸರ್ವೆ ನಂ. 222 ಕ್ಕೆ ಸಂಬಂಧಿಸಿದಂತೆ ದಾವೆ ದಾಖಲಿಸಿದ್ದೇನೆ. ಸರ್ವೆ ನಂ. 222/2,222/3 ಕ್ಕೆ ಸಂಬಂಧಿಸಿದಂತೆ ದಾವೆ ದಾಖಲಿಸಿದ್ದೇನೆ. ಕೊಳವೆ ಬಾವಿ 96/4 ರಲ್ಲಿ ಇದೆ ಎಂದರೆ ಸರಿ. ನನ್ನ ಅಣ್ಣ ತಮ್ಮಂದಿರ ಜೊತೆ ಮಾತಾಡಿಕೋಂಡುಅವರ ಒಪ್ಪಿಗೆಯ ಮೇರೆಗೆ ಗಂಗಾ ಕಲ್ಯಾಣ ಯೋಜನೆಯ ಅಡಿ ಕೆಳವೆ ಬಾವಿ ತಯಾರಿಸಿದ್ದೇನೆ ಎಂದರೆ ಸರಿಯಲ್ಲ.

3. ಕಡಲೆಕಾಯಿಯನ್ನು ಮಧ್ಯವರ್ತಿಯಾಗಿ ಬೇರೆಯವರಿಗೆ ಕೊಡಿಸುತ್ತಿದ್ದೆ ಈ ರೀತಿ ವ್ಯವಹಾರ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನಮಗೆ ಕೃಷಿಯೇತರ ಆದಾಯ ಇಲ್ಲ ಎಂದರೆ ಸರಿಯಲ್ಲ. ನಾವೆಲ್ಲರೂ ಒಟ್ಟು ಕುಟುಂಬದಲ್ಲಿದ್ದಾಗ ನಾನು ಒಟ್ಟು ಕುಟುಂಬದ ಮ್ಯಾನೇಜರ್ ಇದ್ದೆ ಎಂದರೆ ಸರಿಯಲ್ಲ. ನನಗೆ ಮಂಜೂರಾಗಿದ್ದ ಜಮೀನು ಒಟ್ಟು ಕುಟುಂಬಕ್ಕೆ ಸೇರಿದ್ದು ಎಂದರೆ ಸರಿಯಲ್ಲ. ನಾನು ಕುಟುಂಬದ ಕಾರ್ತಾ ಇದ್ದುದರಿಂದ ನನ್ನ ಹೆಸರಿಗೆ ಗ್ಯಾಂಟ್ ಸರ್ಟಿಫೀಕೇಟ್ ನೀಡಿರುತ್ತಾರೆ ಎಂದರೆ ಸರಿಯಲ್ಲ. ಗ್ರ್ಯಾಂಡ್ ಸರ್ಟಿಪೀಕೇಟ್ನ್ನು ನನ್ನ ಹೆಸರಿಗೆ ನೀಡಲು ಉಳಿದ ಕುಟುಂಬದ ಸದಸ್ಯರು ಒಪ್ಪಿಗೆ ನೀಡಿದ ಮೇರೆಗೆ ನನ್ನ ಹೆಸರಿಗೆ ಸರ್ಟಿಫೀಕೇಟ್ ನೀಡಿರುತ್ತಾರೆ ಎಂದರೆ ಸರಿಯಲ್ಲ. ಜಮೀನು ಮಂಜೂರಾತಿಗೆ ಪಾವತಿಸಿರುವ ಕಿಮ್ಮತ್ತು ಒಟ್ಟು ಕುಟುಂಬದ ಪರವಾಗಿ ಪಾವತಿಸಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಒಟ್ಟು ಕುಟುಂಬದ ಪರವಾಗಿ ಕೊಳವೆ ಬಾವಿ ತೆಗೆದಿದ್ದೇನೆ ಎಂದರೆ ಸರಿಯಲ್ಲ.

4. ನನಗೆ ಗೊತ್ತಿಲ್ಲದೆ ವಿಭಾಗ ಪತ್ರ ಮಾಡಿಕೊಂಡಿದ್ದಾರೆಂದು ಸುಳ್ಳು ಹೇಳುತಿತದ್ದೇನೆ ಎಂದರೆ

ಸರಿಯಲ್ಲ. ದಾವಾ ಸ್ವತ್ತು ನನ್ನ ಸ್ವಯಾರ್ಜಿತ ಸ್ವತ್ತು ಅಲ್ಲ ಎಂದರೆ ಸರಿಯಲ್ಲ. ನಿಪಿ 10 ರಡಿ ನನಗೆ ಸರ್ವೆ ನಂ 196/4 ರಲ್ಲಿ 26 ಗುಂಟೆ,ಸರ್ವೆ ನಂ 159/2 ರಲ್ಲಿ 1 ಎಕರೆ 12 ವರೆ ಗುಂಟೆ,ಸರ್ವೆ ನಂ 222 ರಲ್ಲಿ 34 ಗುಂಟೆ ಒಟ್ಟು 3 ಎಕರೆ 2 ವರೆ ಗುಂಟೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಒಟ್ಟು 2 ಎಕರೆ 4 ಗುಂಟೆ ಬಂದಿರುತ್ತದೆ ಎಂದರೆ ಇರಬಹುದು.

5. 2 ನೇ ಪ್ರತಿವಾದಿಗೆ 1 ಎಕರೆ 23 ಗುಂಟೆ ಬಂದಿದೆ ಎಂದರೆ ಇರಬಹುದು. ದಾದಾ ನಾಯಕ ಅವರ ಹೆಸರಿಗೆ ಪಿತ್ರಾರ್ಜಿತ ಸ್ವತ್ತು 18 ಎಕರೆ ಇತ್ತು ಎಂದರೆ ಹೇಳಲಾಗುವುದಿಲ್ಲ. ದಾವಾ ಸ್ವತ್ತು ಮಾರಲು ಕೃಷಿ ಮಾಡಲುಯೋಗ್ಯವಾಗಿರಲಿಲ್ಲ ಅದನ್ನು ಎಲ್ಲರೂ ಸೇರಿಕೊಂಡು ಅಸಲು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಉಳಿದ ಕುಟುಂಬದ ಸದಸ್ಯರನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ನನ್ನ ಜಮೀನಿಗೆ ಸಂಬಂಧಿಸಿದಂತೆ ದಾವೆ ಸಲ್ಲಿಸಿದ್ದೇನೆ. ದಾವಾ ಸ್ವತ್ತನ್ನು ಕಬಳಿಸಲು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಾನು ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃಃ ಇಲ್ಲಾ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಗಣಕೀಕರಣಗೊಳಿಸಲಾಯಿತು.)

ಓ ಹೇ ಕೇ ಸ ಇದೆ

ಸಿಜೆ ಮತ್ತು ಜೆಎಂಎಫ್ ಸಿ. ,
ಬಾಗೇಪಲ್ಲಿ